ಶ್ರೀ ಬಾಬಾಗೌಡ ಆರ್. ಪಾಟೀಲ್: ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನೂ ಕಂಡುಕೊಳ್ಳುತ್ತೇವೆ ಎಂಬ ಒಂದು ಮಾತೂ ಸಹ ಹೇಳುವುದಕ್ಕಾಗಲಿಲ್ಲ. ಅವರಿಗೆ ಅಷ್ಟೂ ಔದಾರ್ಯ ಬೇಡವೇ? ನಾವೂ ರೈತರ ಮಕ್ಕಳು ಎಂದು ಹೇಳುವವರು, ಅವರ ಒತ್ತಾಯಗಳ ಬಗ್ಗೆಯೂ ಗಮನಹರಿಸಲಿ. ಯಾವುವು ಸಾಧ್ಯವಿಲ್ಲವೋ ಅವುಗಳನ್ನು ಬಿಟ್ಟು, ಯಾವು ಯಾವುವು ಸಾಧ್ಯ ಅವುಗಳಿಗೆ ಪರಿಹಾರ ಕಂಡುಕೊಳ್ಳುತ್ತೇವೆ, ಬಜೆಟ್‌ವರೆಗೆ ನೀವು ಕಾಯಿರಿ ಎಂದು ಹೇಳುವಂಥ ಸೌಜನ್ಯ ಈ ಸರ್ಕಾರಕ್ಕೆ ಇಲ್ಲವೇ? ಏನೇನೋ ಕತೆ ಕಟ್ಟಿ ಹೇಳುವುದನ್ನು ವಿಚಾರ ಮಾಡುತ್ತಿದ್ದೀರಿ, ಮಾತಿನ ಮಂಟಪ ಕಟ್ಟುತ್ತಿದ್ದೀರಿ, ನಿಮಗೆ ಇಷ್ಟು ಸೌಜನ್ಯ ಇಲ್ಲವ?

ಶ್ರೀ ವಾಟಾಳ್ ನಾಗರಾಜ್ : ನಮ್ಮ ಹಳ್ಳಿ ಜನ ಬುಡುಬುಡಿಕೆ ಆಡಿಸಿಕೊಂಡು ಬರುತ್ತಾರೆ. ಆ ರೀತಿ ಇದು ಬುರುಬುರುಡೆ ಕತೆ.....

(ಗೊಂದಲ)

ಶ್ರೀ ಬಾಬಾಗೌಡ ಆರ್. ಪಾಟೀಲ್: ರೈತರ ಶಕ್ತಿಯನ್ನು ನೋಡಬೇಕೆನ್ನುವ, ಈ ಚಳುವಳಿಯನ್ನು ದಮನ ಮಾಡಬೇಕೆನ್ನುವ ಪ್ರಯತ್ನ ಮಾಡುತ್ತಿದ್ದಾರೆ. ಈ ಕಾರಣದಿಂದ ಈ ಸರ್ಕಾರಕ್ಕೆ ಧಿಕ್ಕಾರ ಎಂದು ಹೇಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಶ್ರೀ ಬಾಬಾಗೌಡ ಪಾಟೀಲ್ ಮತ್ತು ಪ್ರೊ. ಎಂ.ಡಿ. ನಂಜುಂಜಸ್ವಾಮಿ ಅವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರಾದ ಬಾಬಾಗೌಡ ಪಾಟೀಲರು ಏನು ಹೇಳಿದರು, ನಾವು ಈ ಸಲಹೆಯನ್ನು ಮೊದಲೇ ಕೊಟ್ಟಿದ್ದೇವೆ, ಸೋಮವಾರ ಚಳುವಳಿ ನಡೆಸುತ್ತಿದ್ದೇವೆಂದು ಹೇಳಿದರು. ಇದು ಕೇವಲ ರೈತಸಂಘದ ಕಾರ್ಯಕ್ರಮ ಅಲ್ಲ, ಇಡೀ ರೈತವರ್ಗದ ಕಾರ್ಯಕ್ರಮವಾಗುತ್ತದೆ. ಆದ್ದರಿಂದ ಅವರನ್ನು ಕರೆದು ಮಾತನಾಡುವುದಕ್ಕೂ ಕೂಡ ಈ ಸರ್ಕಾರ ತಯಾರಿಲ್ಲ. ಈಗಲಾದರೂ, ಅವರನ್ನು ಕರೆದು ಮಾತನಾಡುತ್ತೇವೆ ಎಂಬ ಸೌಜನ್ಯವನ್ನು ಈ ಸರ್ಕಾರ ತೋರಿಸುತ್ತಿಲ್ಲ. ಇದು ರೈತ ಚಳುವಳಿಯನ್ನು ದಮನ ಮಾಡುವ ರೀತಿಯಲ್ಲಿ ನಡೆಯುತ್ತಿದೆ. ಆದ್ದರಿಂದ ಇದು ರೈತ ವಿರೋಧಿ ಸರ್ಕಾರವೆಂದು ಹೇಳಿ ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ಶ್ರೀ ಸಿ. ಬೈರೇಗೌಡರೂ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಈ ಸರ್ಕಾರಕ್ಕೆ ಖಂಡಿತ ಕಾಳಜಿ ಇಲ್ಲ, ಕಳಕಳಿ ಇಲ್ಲ. ಸುಮ್ಮನೆ ತಿರುಗಿಸಿ, ಬೇರೆ ಬೇರೆ ಉತ್ತರ ಕೊಟ್ಟು, ಕೆಟ್ಟ ಅಭಿಪ್ರಾಯ ಬರತಕ್ಕ ಹೇಳಿಕೆಯನ್ನು ಕೊಡುತ್ತಿದ್ದಾರೆಯೇ ಹೊರತು, ಪ್ರಾಮಾಣಿಕವಾಗಿ ರೈತರ ಬಗ್ಗೆ ನಿಮಗೆ ಕಳಕಳಿ ಇದೆಯೆಂದು ನಾನು ಅಂದುಕೊಂಡಿಲ್ಲ. ಕಳಕಳಿ ಇದ್ದಿದ್ದರೆ ತಾವು ಈ ಬಗ್ಗೆ ಅವರನ್ನು ಕರೆದು ಮಾತನಾಡತಕ್ಕ ಸೌಜನ್ಯ ತೋರಿಸಬಹುದಾಗಿತ್ತು. ಅವರಿಗೆ ಅನುಕೂಲ ಮಾಡುವುದು ಬೇಡ, ಕೊಡುವುದು ಬೇಡ. ಕರೆದು ಮಾತನಾಡಬಹುದಾಗಿತ್ತು. ಅದನ್ನು ಸಹ ಮಾಡದ ಈ ರೈತ ವಿರೋಧಿ ಸರ್ಕಾರವನ್ನು ವಿರೋಧಿಸಿ, ನಾನು ಕೂಡ ಸಭಾತ್ಯಾಗ ಮಾಡುತ್ತೇನೆ. ಈ ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲ. ಇದು ರೈತ ವಿರೋಧಿ ಸರ್ಕಾರ, ಬುಡುಬುಡಿಕೆ ಸರ್ಕಾರ.

(ಶ್ರೀ ವಾಟಾಳ್ ನಾಗರಾಜ್‌ರವರೂ ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ: ಒಂದೂವರೆ ವರ್ಷದಿಂದ ರೈತರ ಸಮಸ್ಯೆಗಳನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಇದರ ಬಗ್ಗೆ ನಾವು ಪ್ರತಿಭಟನೆ ಮಾಡಲೇಬೇಕಾಗಿದೆ.